<u>ಸಾಕ್ಷಿಗೆ ದಿನಾಂಕ *14-03-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಆರ್ ಹೆಚ್ ಕೆ ವಕೀಲರಿಂದ**

ನನಗೆ ಈಗ 24 ವರ್ಷ ವಯಸ್ಸು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ದೂರನ್ನು ನಾನು ನೀಡಿರುತ್ತೇನೆ. ಅಪಘಾತವು 2019 ರಲ್ಲಿ ಆಗಿರುತ್ತದೆ. ನಾನು ಮತ್ತು ಇನ್ನೂ ಇಬ್ಬರು ಕರಡಿಯಿಂದ ದಾಸವಾಳಕ್ಕೆ ಹೊರಟಿದ್ದೇವು. ನಾವು ಬೈಕ ಮೇಲೆ ಹೊರಟಿದ್ದೇವು. ಬೈಕ ಗುರುಪ್ರಸಾದ ರವರಿಗೆ ಸೇರಿದ್ದು. ಸದರಿ ಬೈಕನ್ನು ಗುರುಪ್ರಸಾದ ಚಲಾಯಿಸುತ್ತಿದ್ದರು. ನಾನು ಬೈಕನಲ್ಲಿ ಹಿಂದೆ ಕುಳಿತಿದ್ದೇನು. ಅಪಘಾತ ಪಡಿಸಿದ ಟ್ರ್ಯಾಕ್ಟರ ವಾಹನವನ್ನು ನೋಡಿರುತ್ತೇನೆ. ದೂರನ್ನು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ದೂರನ್ನು 3 ಜನ ನೀಡಿರುತ್ತೇವೆ. ಆಸ್ಪತ್ರೆಯಲ್ಲಿ ದೂರನ್ನು ಬರೆದುಕೊಟ್ಟಿರುತ್ತೇವೆ. ನಾನು ಪೋಲೀಸ ಠಾಣೆಗೆ ಹೋಗಿರುವುದಿಲ್ಲ. ಬೈಕ ಮತ್ತು ಟ್ರ್ಯಾಕ್ಟರ ನಡುವೆ ಅಪಘಾತ ಆಗಿರುತ್ತದೆ. ಬೈಕ ನಂಬರ ಹೇಳಲು ಆಗುವುದಿಲ್ಲ. ಟ್ರ್ಯಾಕ್ಟರ ನಂ. 7355 ಇರುತ್ತದೆ. ದೂರಿನಲ್ಲಿರುವ ಮಾಹಿತಿ ಗೊತ್ತಿರುವುದಿಲ್ಲ. ಯಾರು ಅಪಘಾತ ಪಡಿಸಿರುತ್ತಾರೆ ಎಂದು ಗೊತ್ತಿರುತ್ತದೆ. ನನಗೆ ಯಾರು ಅಪಘಾತ ಪಡಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಟ್ರ್ಯಾಕ್ಟರ ಹಿಂದೆ ಇದ್ದ ಕುಂಟಿ ಬಡೆದಿರುತ್ತದೆ. ನನಗೆ ಕಬ್ಬಿಣದ ಕುಂಟೆ ಇರುವ ಟ್ರ್ಯಾಕ್ಟರ ಅಪಘಾತ ಪಡಿಸಿರುತ್ತದೆ. ಸಾಕ್ಷಿದಾರರಿಗೆ ಎದರುದಾರರ ಪರ ವಕೀಲರು ಟ್ರ್ಯಾಕ್ಟರನ ಭಾವ ಚಿತ್ರವನ್ನು ತೋರಿಸಿ ಅದರಲ್ಲಿ ಕಬ್ಬಿಣದ ಕುಂಟಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ನಮಗೆ ಅಪಘಾತ ಪಡಿಸಿದ ವಾಹನದ ಹಿಂದೆ ಕಬ್ಬಿಣದ ಕುಂಟಿ ಇತ್ತು ಎಂದು ಹೇಳುತ್ತಾರೆ. ಸಾಕ್ಷಿದಾರರಿಗೆ ಎದರುದಾರರ ಪರ ವಕೀಲರು ಟ್ರ್ಯಾಕ್ಟರ ನಂಬರ 7355 ಇರುವ ಭಾವ ಚಿತ್ರವನ್ನು ತೋರಿಸಿದಾಗ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಸದರಿ ಟ್ರ್ಯಾಕ್ಟರ ನಂಬರ ಇರುವ ವಾಹನವು ನಮಗೆ ಡಿಕ್ಕಿ ಪಡಿಸಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಪೋಲಿಸರ ಮುಂದೆ 7355 ನಂಬರ ಇರುವ ಟ್ರ್ಯಾಕ್ಟರ ಅಪಘಾತ ಪಡಿಸಿರುತ್ತದೆ ಮತ್ತು ಬೇರೆ ಯಾವುದೇ ವಾಹನ ಅಪಘಾತ ಪಡಿಸಿರುವುದಿಲ್ಲ ಎಂದು ಹೇಳಿಕೆ ನೀಡಿರುವುದಿಲ್ಲ. ನಾನು ಪೋಲಿಸ ಠಾಣೆಗೆ ಹೋಗಿ ಪೋಲಿಸರ ಮುಂದೆ 7355 ನಂಬರ ಇರುವ ಟ್ರ್ಯಾಕ್ಟರ ಅಪಘಾತ ಪಡಿಸಿರುತ್ತದೆ ಎಂದು ಹೇಳಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಆಸ್ಪತ್ರೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ನಾವು ಕೆಎ-29/ಟಿಎ 6662 ಈ ವಾಹನದ ಮೇಲೆ ದೂರು

ನೀಡಿರುವುದಿಲ್ಲ. ಕೆಎ-29 /ಟಿಎ 6662 ಈ ವಾಹನದಿಂದ ಅಪಘಾತ ಆಗಿದ್ದು ಮತ್ತು ಅದಕ್ಕೆ ವಿಮೆ ಇತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಮಗೆ ಕೆಎ-29/ಟಿಎ 6662 ಇದರಿಂದ ಅಪಘಾತವಾಗಿದ್ದು ಮತ್ತು ಬೇರೆ ವಾಹನದಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು ಟ್ರ್ಯಾಕ್ಟರ ನಂ.7355 ನಂಬರ ಇರುವ ವಾಹನದಿಂದ ಅಪಘಾತ ಆಗಿರುತ್ತದೆ ಎಂದು ಹೇಳುತ್ತಾರೆ. ನಮಗೆ ಟ್ರ್ಯಾಕ್ಟರ ನಂ.6662 ದಿಂದ ಅಪಘಾತ ಆಗಿದ್ದು, ಅದರೆ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಾಕಾ ನಾಗನಗೌಡ ಮತ್ತು ಎದರುದಾರರು ಮತ್ತು ಊರಿನವರು ನಮ್ಮನ್ನು ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸಾಕ್ಷಿದಾರರು ನನ್ನ ಕಾಕಾ ಮತ್ತು ಊರಿನವರು ಸೇರಿಸಿರುತ್ತಾರೆ ಎಂದು ಹೇಳುತ್ತಾರೆ. ಅಪಘಾತವಾದ ನಂತರ ಬಸನಗೌಡ ರವರು ನಮ್ಮನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿದ್ದರು ಎಂದರೆ ಸರಿಯಲ್ಲ. ನಮ್ಮನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಹೋಗಿದ್ದರು ಎಂದು ಪ್ರಜ್ಞೆ ಇತ್ತು. ಬಸನಗೌಡ ರವರು ಆಸ್ಪತ್ರೆಯ ಖರ್ಚನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಊರಿನ ಹಿರಿಯರು ಬಸನಗೌಡ ರವರ ಮೇಲೆ ಪ್ರಕರಣ ದಾಖಲು ಮಾಡಬಾರದು ಎಂದು ನಮ್ಮ ಮೂರು ಜನರಿಗೂ ಬಸನಗೌಡ ರವರ ಕಡೆಯಿಂದ ಹಣವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ರಾಮಪ್ಪ ಹುಲಿಗೆಪ್ಪ ಕೆಂಗಲ್ಲ ನನ್ನ ಅಜ್ಜ. ರಾಮಪ್ಪ ರವರ ಕೈಯಲ್ಲಿ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವು 3 ಜನ ಬಾಂಡ ಮೇಲೆ ಹಣ ಪಡೆದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನ ಮತ್ತು ನಾವು ಪ್ರಕರಣದಲ್ಲಿ ಸೇರಿಸಿದ ವಾಹನ ಎರಡು ಬೇರೆ ಬೇರೆ ಅಗಿದ್ದು ನಾವು ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಪೆಟ್ಟು ಆಗದೇ ಇದ್ದರು ಪರಿಹಾರಕ್ಕೊಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.03.15 12:39:14 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.